೧೯೮೮-೮೯ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ ೨೮,೦೦೦ ರೂಪಾಯಿಗಳ ಅನುದಾನ ಬಿಡುಗಡೆ ಆಗಿದ್ದು ಆದರಲ್ಲಿ ಗುಬ್ಬಿ ತಾಲ್ಲೂಕು ಭೂ ನ್ಯಾಯ ಮಂಡಳಿಯ ಸದಸ್ಯರಿಗೆ ಟಿ. ಎ. ಹಾಗೂ ಡಿ ಎ. ಮತ್ತು ಸಿಟ್ಟಿಂಗ್ ಫೀ ನೀಡುವುದಕ್ಕಾಗಿ ೪೦೦೦ ರೂಪಾಯಿಗಳ ಹಣವನ್ನು ಮೇ ೮೮ರಲ್ಲಿ ಬಿಡುಗಡೆ ಮಾಡಲಾಗಿದ್ದು, ಭೂ ನ್ಯಾಯ ಮಂಡಳಿಯ ಸದಸ್ಯರುಗಳಿಗೆ ಬಾಕಿ ಇರುವ ಬಿಲ್ಲುಗಳನ್ನು ಈ ವಂಟನ ದಲ್ಲಿ ಚುಕ್ತಗೊಳಿಸಿ ಉಳಿದ ಬಾಕಿ ಬಿಲ್ಲುಗಳನ್ನು ಮುಂದೆ ವಂಟನ ಬಿಡುಗಡೆ ಮಾಡಿದಾಗ ಪಾವತಿ ಮಾಡ ಲಾಗುತ್ತದೆ (ಈ ಬಾಬ್ತಿಗಾಗಿ ಈ ವರ್ಷದ ಬಜೆಟ್‌ನಲ್ಲಿ ಅಂದರೆ ೧೯೮೮-೮೯ರಲ್ಲಿ ರೂ. ೨೦.೦೦ ಲಕ್ಷ ಹಣವನ್ನು ನಿಗಧಿಪಡಿಸಲಾಗಿದ್ದು ಸದಸ್ಯರಿಗೆ ಬರಬೇಕಾದ ಬಾಕಿ ಟಿ.ಎ. ಡಿ.ಎ. ಹಾಗೂ ಸಿಟ್ಟಿಂಗ್ ಫೀ ಹಣದ ಪಾವತಿ ಮಾಡುವಲ್ಲಿ ಯಾವುದೇ ತೊಂದರೆ ಇರುವುದಿಲ್ಲ).

ಮೂರನೇ ಹಿಂದುಳಿದ ಆಯೋಗ

೧೫೫೫. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂರನೇ ಹಿಂದುಳಿದ ಆಯೋಗದ ರಚನೆಯಾಗಿದೆಯೆ ?

ಆ) ಹಾಗಿದ್ದಲ್ಲಿ, ಆಯೋಗದಲ್ಲಿರುವ ಸದಸ್ಯರು ಯಾರು ?

ಇ) ಆಯೋಗದ ವರದಿಯನ್ನು ಮುಂದಿನ ಸಾರ್ವತ್ರಿಕ ಚುನಾವಣೆ ಮುಂಚೆ ಒಪ್ಪಿಸಲು ಸರ್ಕಾರ ಆದೇಶಿಸಿರುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಇದು ಏಕ ಸದಸ್ಯ ಆಯೋಗವಾಗಿರುತ್ತದೆ. ಇದರ ಅಧ್ಯಕ್ಷರು ಸರ್ವೋಚ್ಚ ನ್ಯಾಯಾಲ ಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಓ. ಚಿನ್ನಪ್ಪ ರೆಡ್ಡಿಯವರು.

ಇ) ಆಯೋಗವು ತನ್ನ ವರದಿಯನ್ನು ಒಂದು ವರ್ಷದ ಒಳಗಾಗಿ ಸಲ್ಲಿಸಬೇಕೆಂದು ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ ೨೫೯ ಬಿಸಿಎ ೮೮, ದಿನಾಂಕ ೯-೩-೧೯೮೮ರಲ್ಲಿ ಸೂಚಿಸಿದೆ.

ಕಾರ್ಮಿಕ ನ್ಯಾಯಾಲಯಗಳು

೧೬೬೮. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕಾರ್ಮಿಕ ನ್ಯಾಯಾಲಯಗಳ ಸಂಖ್ಯೆ ಎಷ್ಟು ?

ಆ) ಈ ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರುಗಳ ಹುದ್ದೆಗಳ ಸಂಖ್ಯೆ ಎಷ್ಟು ?

ಇ) ಈ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಈ) ಈ ಮೊಕದ್ದಮೆಗಳ ಇತ್ಯರ್ಥಕ್ಕಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ಒಟ್ಟು—೧೨

ಆ) ಒಟ್ಟು ಹಾಲಿ ೪, ಮಂಗಳೂರಿನ ಕಾರ್ಮಿಕ ನ್ಯಾಯಾಲಯಕ್ಕೆ ಅಧ್ಯಕ್ಷಾಧಿಕಾರಿಗಳನ್ನು ೨೩-೫-೮೮ ರಿಂದ ನಿಯುಕ್ತಿಗೊಳಿಸಿದೆ. ಆದರೂ ೩ ಸ್ಥಾನಗಳು ಖಾಲಿ ಇರುತ್ತವೆ.

ಇ) ೭,೭೯೦